ಮಹಡಿಯೇರಿದರು.

ಋತು ಮರುದಿನದ ಪ್ರಯಾಣಕ್ಕೆ ಬಟ್ಟೆಗಳನ್ನು ಜೋಡಿಸಿಕೊಳ್ಳತೊಡಗಿದ್ದರೆ ರಮ್ಯ ತನ್ನೂರಾದ ನಂದಿಯಲ್ಲಿನ ದೇವಾಲಯ, ಅಪ್ಪಾಜಿಯ ಯೋಗಕೇಂದ್ರದ ಬಗ್ಗೆ ಮಾತನಾಡತೊಡಗಿದ್ದಳು. ಅವಳು ಅಪ್ಪಿತಪ್ಪಿಯೂ ತನ್ನ ಸಾಂಸಾರಿಕ ಜೀವನವನ್ನು ಹೇಳಿಕೊಳ್ಳದಿದ್ದುದನ್ನು ಗಮನಿಸಿದಳು ಋತು. ಅವಳಾಗಿಯೇ ಆ ಬಗ್ಗೆ ಹೇಳುವವರೆಗೆ ಋತು ಸುಮ್ಮನಿರಲೇಬೇಕಿತ್ತು.

ಕತ್ತಲು ಪೂರ್ತಿ ಮುಸುಕಿ ಬಂಗಲೆಯ ಹಕ್ಕಿಗಳ ಕಲರವ ಕಡಿಮೆಯಾಗುವ ವೇಳೆಗೆ ರೂಮಿನ ಬಾಗಿಲನ್ನು ಯಾರೋ ತಟ್ಟಿದಂತಾಯಿತು.

ರಮ್ಯಳೇ ಮೇಲೆದ್ದು ಬಾಗಿಲು ತೆರೆದಳು. ಎದುರಿಗೆ ಕಲಾವತಿ ನಿಂತಿದ್ದರು. ಅವರು ಸಾಕಷ್ಟು ಅತ್ತಿದ್ದಾರೆಂದು ಅವರ ಕೆಂಪಡರಿದ ಮುಖವೇ ಹೇಳಿತು. ಆಕೆ ಮಾತನಾಡದೆ ಒಳಬಂದವರು ಬಟ್ಟೆ ಜೋಡಿಸಿಕೊಳ್ಳುತ್ತಿದ್ದ ಋತುವನ್ನೇ ನೋಡಿದರು.

'ಅಂತೂ ನಿನ್ನ ಚಿಕ್ಕಮ್ಮನಿಗೆ ಒಂದು ಮಾತೂ ಹೇಳದೆ ರಮ್ಯಾಳ ಊರಿಗೆ ಹೊರಡ್ತಿದಿಯಾ ಅಲ್ವಾ ಋತು, ನಾನು ನಿನ್ನ ಹೆತ್ತ ತಾಯಿಯಲ್ಲ ಅನ್ನೋದನ್ನು ನೀನು ನೆನಪು ಮಾಡಿಕೊಟ್ಟೆ ಬಿಡು...'

ಇಷ್ಟು ಹೇಳುವಾಗಲೇ ಆಕೆಯ ಗಂಟಲುಬ್ಬಿ ಧ್ವನಿ ಗದ್ಗದಿತವಾಯಿತು. ಋತು ತಲೆ ಎತ್ತಿ ಕಲಾವತಿಯನ್ನು ನೋಡಿದಳು. ಆಕೆ ಸಾಕಷ್ಟು ಸೋತವರಂತೆ ಕಂಡರು. ಚಿಕ್ಕಂದಿನಿಂದ ಆಕೆಯ ವಾತ್ಸಲ್ಯದಲ್ಲೇ ಬೆಳೆದ ಋತುವಿಗೆ ಆಕೆಯನ್ನು ಈ ಸ್ಥಿತಿಯಲ್ಲಿ ನೋಡಿ ಸಂಕಟವಾಯಿತು.

'ಅದು ಹಾಗಲ್ಲ ಚಿಕ್ಕಮ್ಮ...' ಎಂದೇನೋ ಹೇಳಲು ಯತ್ನಿಸಿದಳು.

'ನೀನು ಹೇಳದಿದ್ರೂ ನಂಗೆಲ್ಲಾ ಅರ್ಥವಾಗುತ್ತೆ ಋತು. ನಿನ್ನ ಹೇಮಂತನ ಪ್ರೀತಿಯನ್ನು ನಾನು ವಿರೋಧಿಸ್ತಿದೀನಿ, ನಿಮ್ಮ ಮದುವೆಗೆ ಅಡ್ಡಗೋಡೆಯಾಗಿ ನಿಂತಿದ್ದೀನಿ ಅಂತ ನಿಂಗೆ ನನ್ನ ಮೇಲೆ ಬೇಜಾರಿದೆ, ನೀನು ನನ್ನ ಮಾತನ್ನು ಕೇಳ್ತಿಲ್ಲವಲ್ಲ ಅಂತ ನಂಗೆ ನಿನ್ನ ಮೇಲೆ ಕೋಪವಿದೆ....ಆದ್ರೆ ನಾನು ಏನ್ಮಾಡ್ಲಿ ಋತು, ಯಾವಾಗ್ಲೂ ಈ ಕೋಟೆ ಬಂಗ್ಲೆಯ ಯೋಗಕ್ಷೇಮದ ಬಗ್ಗೆ ಯೋಚಿಸೋದು ಬಿಟ್ಟು ನಂಗೇನೂ ಗೊತ್ತಿಲ್ಲ, ಈಗ್ಲೂ ಹೇಳ್ತಿದೀನಿ, ನಿನ್ನ ಹೇಮಂತನ ಸಂಬಂಧ ಬಂಗ್ಲೆಯ ಸರ್ವನಾಶಕ್ಕೆ ನಾಂದಿಯಾಗ್ಬಹುದು ಅಂತಾನೇ ನಂಗೆ ಅನ್ನಿಸ್ತಿದೆ, ಬೇಡ ಋತು, ಹಟ ಮಾಡ್ಬೇಡ, ಹೇಮಂತನನ್ನು ಮರ್ತುಬಿಡು, ಅವ್ನಿಗಿಂತ ಒಳ್ಳೆಯ ಹುಡುಗನನ್ನು ನಾನು ನಿಂಗೆ ಆರಿಸಿ ಕೊಡ್ತೀನಿ, ಹೇಮಂತನ ಮೇಲೆ ಅಪಾರ ಪ್ರೀತಿಯನ್ನಿಟ್ಟುಕೊಂಡಿರುವ ನಿನಗೆ ಅವನನ್ನು ಮರೆಯುವುದು ಎಷ್ಟು ಕಷ್ಟ ಅಂತ್ಲೂ ಗೊತ್ತು, ಆದ್ರೂ ಈ ಕೋಟೆ ಬಂಗ್ಲೆಗಾಗಿ ನೀನು ನಿನ್ನ ಪ್ರೀತಿಯನ್ನು ತ್ಯಾಗ ಮಾಡ್ಲೇಬೇಕು, ನಿನ್ನ ಫ್ರೆಂಡಿನ ಊರಿಂದ ವಾಪಸ್ಸು ಬರುವಾಗ ಅವನನ್ನು ಮರ್ತು ಹೊಸ ಋತುವಾಗಿ ಬರ್ತಿಯ ಅಂತ ನಂಬ್ತೀನಿ, ಈ ಚಿಕ್ಕಮ್ಮನ ಮೇಲೆ ಸಾಸಿವೆಯಷ್ಟಾದ್ರೂ ಪ್ರೀತಿ ಉಳಿದಿದ್ರೆ ಈ ನನ್ನ ಮಾತನ್ನು ನಡೆಸಿಕೊಡು..' ಎಂದ ಕಲಾವತಿ ಬಾಗಿ ಋತುವಿನ ಹಣೆಗೊಂದು ಹೂಮುತ್ತನ್ನಿತ್ತು ಅವಳನ್ನು ಆಲಂಗಿಸಿಕೊಂಡರು. ಮತ್ತೆ ಹೆಚ್ಚು ಹೊತ್ತು ನಿಲ್ಲದೆ ಹೊರಟೇ ಹೋದರು.

ಋತುವೂ ಚಿಕ್ಕಮ್ಮನ ಈ ಅನಿರೀಕ್ಷಿತ ವರ್ತನೆಯಿಂದ ದಿಗ್ಭ್ರಾಂತಳಾದಳು. ತನ್ನ, ಹೇಮಂತನ ಪ್ರೀತಿಯನ್ನು ತುಂಬು ಮನಸ್ಸಿನಿಂದ ಒಪ್ಪಿಕೊಂಡಿದ್ದ ಆಕೆಯೇ ಹೀಗೆ ಬದಲಾಗುವುದೆಂದರೆ....ಅವಳಿಗೆ ವಿಚಿತ್ರವೆನಿಸಿತು.

'ಚಿಕ್ಕಮ್ಮ ಎಷ್ಟು ಚೆನ್ನಾಗಿ ನಾಟಕ ಮಾಡಿ ನೀನು ಹೇಮಂತನನ್ನು ಮದ್ವೆಯಾಗಬಾರ್ದು ಅಂತ ಹೇಳಿ ಹೋದ್ರು, ನೋಡಿದ್ಯಾ ಋತು....' ರಮ್ಯಳೆಂದಾಗ ಋತು ಚಕಿತಳಾಗಿ ಅವಳತ್ತ ನೋಡಿದಳು.

ಇದು ನಾಟಕವೇ?....! ತನ್ನನ್ನು ಒಪ್ಪಿಸಲು ಹೂಡಿದ ತಂತ್ರವೇ? ನಿರ್ಧರಿಸಲಾರದೆ ಸೋತಳು. ಯಾವ ದೃಷ್ಟಿಕೋನದಿಂದ ನೋಡಿದರೂ ಚಿಕ್ಕಮ್ಮನ ಮಾತುಗಳಲ್ಲಿ, ಹಾವಭಾವಗಳಲ್ಲಿ ನಾಟಕದ ಯಾವ ಲೇಪನವೂ ಇರಲಿಲ್ಲವಲ್ಲ. ಅವಳು ತನ್ನನ್ನು ಆಲಂಗಿಸಿಕೊಂಡಾಗ ಅವಳ ವಾತ್ಸಲ್ಯದ ಬಿಸಿಯುಸಿರು ಹೃದಯವನ್ನು ತಟ್ಟಿತ್ತು. ಹಾಗಾದರೆ ಅದೂ ನಾಟಕವೇ?....ಸೋತು ತಲೆಯ ಮೇಲೆ ಕೈ ಹೊತ್ತಳು.

'ಅಯ್ಯೋ ಋತು, ಇಷ್ಟಕ್ಕೇ ಕಂಗೆಟ್ರೆ ಹೇಗೆ?....ಪ್ರೀತಿ ಮಾಡಿದ್ಮೇಲೆ ಜಗತ್ತಿಗೆ ಹೆದರ್ಬಾರ್ದು ಅಂತ ನಿಂಗೂ ಗೊತ್ತು, ಆಂಟಿಯ ಎಮೋಷನಲ್ ಬ್ಲಾಕ್‌ಮೇಲಿಗೆ ನೀನು ತಲೆಕೆಡಿಸಿಕೊಳ್ಬೇಡ, ಆರಾಮಾಗಿ ಪ್ಯಾಕಿಂಗ್ ಮುಗ್ಸು....' ಎಂದಳು ರಮ್ಯ.

ಆ ರಾತ್ರಿ ಕಲಾವತಿ ಮೌನವಾಗಿಯೇ ಎಲ್ಲರಿಗೂ ಊಟ ಬಡಿಸಿದರು. ಪುರುಷೋತ್ತಮರೇ ಆಗಾಗ ಗೆಳತಿಯರನ್ನು ಮಾತನಾಡಿಸುತ್ತಾ ಲವಲವಿಕೆಯಿಂದಿದ್ದರು. ಈ ದಿನ ಅಪರೂಪಕ್ಕೆ ಭರತನೂ ತಾನಾಗಿಯೇ ಅವರ ಜೊತೆ ಊಟಕ್ಕೆ ಬಂದು ಕುಳಿತಿದ್ದ.

'ಬೆಳಿಗ್ಗೆ ಬೇಗ ತಿಂಡಿ ಮಾಡಿ ಬಿಡು, ನಂಗೂ ನಾಳೆ ಕೋರ್ಟ್‌ಗೆ ಹೋಗೋದಿದೆ, ಬೇಗ ಹೊರಡ್ಬೇಕು....' ಎಂದವರು 'ಗುರುತು ಪರಿಚಯವಿಲ್ಲದ ಊರು, ನಿನ್ನ ಮನಸ್ಸಿನ ನೆಮ್ಮದಿಗೋಸ್ಕರ ಅಲ್ಲಿಗೆ ನಿನ್ನನ್ನು ಕಳುಹಿಸಲು ಒಪ್ಪಿಕೊಂಡೆ, ಹುಷಾರಾಗಿ ಹೋಗಿದ್ದು ಬಾ ಋತು...' ಎಂದು ವಾತ್ಸಲ್ಯದಿಂದ ಋತುವಿನ ಬೆನ್ನು ತಟ್ಟಿದರು.

'ಅಂಕಲ್, ನೀವೇನೂ ಯೋಚಿಸ್ಬೇಡಿ, ನಿಮ್ಮ ರಾಜಕುಮಾರಿಯನ್ನು ಜೋಪಾನವಾಗಿ ನೋಡಿಕೊಳ್ತೀನಿ, ನಾಲ್ಕು ದಿನ ಅಷ್ಟೇ..' ಎಂದಳು ರಮ್ಯ.

'ಹೇಮಂತನನ್ನು ಕಾಂಟ್ಯಾಕ್ಟ್ ಮಾಡಲು ಟ್ರೈ ಮಾಡ್ತಾನೆ ಇದ್ದೆ, ಅವ್ನು ಸಿಗ್ಲಿಲ್ಲ, ಅವನ ಇನ್ವೆಸ್ಟಿಗೇಷನ್ ಎಲ್ಲಿಯವರೆಗೆ ಬಂದಿದೆ ಅಂತ್ಲೂ ಗೊತ್ತಾಗ್ಲಿಲ್ಲ, ಆದಷ್ಟು ಬೇಗ ಆ ಸೀರಿಯಲ್ ಕಿಲ್ಲರ್‌ನ ಪತ್ತೆಯಾಗಿ ಬಿಟ್ರೆ ನಂಗೂ ನೆಮ್ಮದಿ, ಋತುಹೇಮಂತರ ಮದ್ವೆಯ ಬಗ್ಗೆ ಯೋಚ್ನೆ ಮಾಡ್ಬೋದು...' ಪುರುಷೋತ್ತಮರ ಮಾತುಗಳನ್ನು ಕೇಳಿ ಋತುವಿನ ಮುಖವರಳಿದರೆ ಕಲಾವತಿಯ ಮುಖ ಬಿಗಿದುಕೊಂಡಿತು.

* * *

## ಹೇಮಂತನಿಂದ ಫೋನ್

ಆ ರಾತ್ರಿ ಋತು–ರಮ್ಯರು ಮಲಗುವ ಸಿದ್ಧತೆಯಲ್ಲಿದ್ದಾಗ ಋತುವಿನ ಮೊಬೈಲಿಗೊಂದು ಕರೆ ಬಂತು. ಅದು ಹೇಮಂತನದೇ ಎಂದು ಅರಿವಾದಾಗ ಅವಳಿಗರಿವಿಲ್ಲದಂತೆ ಮುಖ ಗುಲಾಬಿಯಂತಾಯಿತು.

'ಸರಿ ಬಿಡು, ನಿನ್ನ ರಾಜಕುಮಾರ ಲೈನಿನಲ್ಲಿದ್ದಾನೆ, ಅದೆಷ್ಟು ಹೊತ್ತು ಮಾತಾಡ್ತಿ ಅಂತ ನೋಡೇ ಬಿಡ್ತೀನಿ..' ರಮ್ಯ ಕೀಟಲೆ ಮಾಡಿದಳು. ಅವರಿಬ್ಬರ ಏಕಾಂತಕ್ಕೆ ತೊಂದರೆಯಾಗಬಾರದೆಂದು ಇಯರ್ ಫೋನ್ ಹಾಕಿಕೊಂಡು ತನಗಿಷ್ಟವಾದ ಹಾಡುಗಳನ್ನು ಕೇಳಲಾರಂಭಿಸಿದಳು.

'ಹೇಗಿದ್ದಾಳೆ ಕೋಟೆ ಬಂಗ್ಲೆಯ ರಾಜಕುಮಾರಿ?' ಅತ್ತಲಿಂದ ಹೇಮಂತನ ಗಡಸು ಧ್ವನಿ. ಅವನ ಧ್ವನಿ ಕಿವಿಗೆ ಬೀಳುತ್ತಿದ್ದಂತೆ ನಿರಾಳವಾದ ಅನುಭವ ಋತುವಿಗೆ. ತಾನು ಬದುಕಿನಲ್ಲಿ ನೆಮ್ಮದಿಯಾಗಿರಲು ಹೇಮಂತನೊಬ್ಬ ಜೊತೆಯಿದ್ದರೆ ಸಾಕೆನಿಸಿತು ಅವಳಿಗೆ.

'ಸುಮ್ನೆ ಹೊಗಳ್ತಿಯಾ ಹೇಮಂತ್ ನೀನು, ನಿಜ ಹೇಳಬೇಕಂದ್ರೆ ನಿಂಗೆ ನನ್ನ ಮೇಲೆ ಪ್ರೀತಿಯೇ ಇಲ್ಲ, ನಿಂಗೆ ನನ್ನ ನೆನಪೇ ಇರಲ್ಲ ಅಲ್ವಾ, ನಾನು ಎಷ್ಟು ಸಾರಿ ನಿಂಗೆ ಕಾಲ್ ಮಾಡಿದ್ರೂ ನೀನು ರಿಸೀವ್ ಮಾಡೋದೇ ಇಲ್ಲ...' ದೂರಿದಳು.

'ಏನ್ಮಾಡ್ಲಿ ಡಿಯರ್, ನನ್ನ ಕೆಲಸವೇ ಹಾಗಲ್ವಾ, ಈ ಸಲದ ಇನ್ವೆಸ್ಟಿಗೇಷನ್ ಸೀರಿಯಸ್ಸಾಗೂ ಇದೆ, ಆ ಸೀರಿಯಲ್ ಕಿಲ್ಲರನ್ನು ಕಂಡು ಹಿಡಿಯಲೇಬೇಕಾದ ಪ್ರೆಷರ್ ನಮ್ಮ ಮೇಲಿದೆ, ಕೊಲೆಗಾರನ ಪತ್ತೆಯಾದ್ರೆ ಮಾತ್ರ ನಿಮ್ಮ ಕಾಲೇಜ್ ರೀ ಓಪನ್ ಆಗುವ ಪರಿಸ್ಥಿತಿ ಇರೋದ್ರಿಂದ ವಿಷಯ ಮತ್ತಷ್ಟು ಕ್ರಿಟಿಕಲ್ ಆಗಿದೆ, ಸಾಕಷ್ಟು ಕ್ಲೂಗಳು ಈ ಸಲ ನಮ್ಗೆ ಸಿಕ್ಕಿವೆ, ಆದಷ್ಟು ಬೇಗ ಕೊಲೆಗಾರನನ್ನು ಪತ್ತೆ ಹಚ್ಚೀವಿ....'

ಹೇಮಂತ ವಿವರಿಸಿದಾಗ ಋತುವಿಗೆ ಅಯ್ಯೋ ಪಾಪವೇ ಎನಿಸಿತು. ಜೊತೆಗೆ ಕಾಲೇಜಿನಲ್ಲಿ ಕಲಿಯುವ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯದ ನೆನಪಾಗಿ ಆತಂಕವೂ ಆಯಿತು. ಪರೀಕ್ಷೆಗಳು ಸಮೀಪಿಸಿರುವ ಸಮಯ, ಒಂದೊಂದು ನಿಮಿಷವೂ ಅಮೂಲ್ಯವೇ, ಬೇಗ ಕೊಲೆಗಾರನ ಪತ್ತೆಯಾಗದಿದ್ದರೆ ವಿದ್ಯಾರ್ಥಿಗಳೊಂದಿಗೆ ಜ್ಞಾನದೇಗುಲವೂ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ.

'ತಮಾಷೆಗೆ ಹಾಗಂದೆ ಹೇಮಂತ್, ಆದಷ್ಟು ಬೇಗ ಕೊಲೆಗಾರನ ಪತ್ತೆಯಾದ್ರೆ ಸಾಕು...' ಎಂದ ಋತು ಮರುದಿನ ತಾನು ರಮ್ಯಾಳೊಂದಿಗೆ ಅವಳ ಊರಾದ ನಂದಿಗೆ ಹೋಗುತ್ತಿರುವುದಾಗಿ ಹೇಳಿದಳು.

(ಸಶೇಷ)